ಸಾಕ್ಷಿಯನ್ನು ದಿನಾಂಕ **20.04.2022** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಃ ಆರೋಪಿ ಪರ ವಕೀಲರಿಂದಃ

10. ರಾಮಕೃಷ್ಣ ಅಪಾರ್ಟ್ ಮೆಂಟ್ ದಲ್ಲಿರುವ ಫ್ಲಾಟ್ ನ್ನು ನಾನು ರೂ.3,00,000/- ಗಳಿಗೆ 1995-1996 ರಲ್ಲಿ ಖರೀದಿಸಿದ್ದೇನೆ. ಆ ಫ್ಲಾಟ್ ನ್ನು ಭಾಸ್ಕರ್ ಕಾವೂರು ಈತನಿಗೆ 1999 ರಲ್ಲಿ ರೂ.3,32,000/- ಗಳಿಗೆ ಮಾರಾಟ ಮಾಡಿದ್ದೇನೆ.

11. ಪೊಲೀಸರು ನಮ್ಮ ಮನೆಯ ದಾಳಿ ಮಾಡಿದಾಗ ನಾನು ಮನೆಯಲ್ಲಿ ಹಾಜರಿದ್ದೆನು. ಪೊಲೀಸರು ಬ್ಯಾಂಕಿನಲ್ಲಿದ್ದ ನಮ್ಮ ಲಾಕರನ್ನು ಶೋಧನೆ ಮಾಡಿದ್ದಾರೆ. ಮನೆ ಮತ್ತು ಲಾಕರ್ ದಲ್ಲಿ ನಮ್ಮ ಬಂಗಾರದ ಆಭರಣಗಳು ಇದ್ದವು. ಅವುಗಳನ್ನು ಪೊಲೀಸರು ನೋಡಿದ್ದಾರೆ. ಆ ಎಲ್ಲಾ ಬಂಗಾರದ ಆಭರಣಗಳಲ್ಲಿ ಕೆಲವೊಂದು ನನ್ನ ಮದುವೆ ಕಾಲಕ್ಕೆ, ನನ್ನ ಮಗನ ಉಪನಯನದ ಕಾಲಕ್ಕೆ, ಗೃಹಪ್ರವೇಶದ ಸಮಯದಲ್ಲಿ ಉಡುಗೊರೆಯಾಗಿ ಬಂದಿವೆ. ಆ ಆಭರಣಗಳನ್ನು ಖರೀದಿಸಿರುವುದಿಲ್ಲ ಮತ್ತು ಅವುಗಳನ್ನು ಪಡೆದುಕೊಳ್ಳಲು ಯಾವುದೇ ಹಣವನ್ನು ನನ್ನ ಗಂಡ ನೀಡಿರುವುದಿಲ್ಲ.

12. ಮನೆ ಶೋಧನೆ ಮಾಡಿದ ಸಮಯದಲ್ಲಿ ಪೊಲೀಸರು ಮಹಜರು ಮೇಲೆ ನನ್ನ ಸಹಿಯನ್ನು ಪಡೆದಿದ್ದಾರೆ. ನಾವು ವಾಸವಿದ್ದ ಮನೆಯಲ್ಲಿ ಇದ್ದಂತಹ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳ ಮೌಲ್ಯವನ್ನು ಪೊಲೀಸರು ಮಹಜರ್ ದಲ್ಲಿ ಹೆಚ್ಚಾಗಿ ತೋರಿಸಿದ್ದಾರೆ. ಎಲೆಕ್ಟ್ರಿಕಲ್ ಉಪಕರಣಗಳು ನಮ್ಮ ಮನೆಯ ಮೌಲ್ಯಮಾಪನ ಮಾಡುವಾಗ ಗಣನೆಗೆ ತೆಗೆದುಕೊಳ್ಳಲಾಗಿದೆ. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳ ಮೌಲ್ಯವನ್ನು ದಾಳಿ ಮಾಡಿದ ದಿನಾಂಕದಂದು ಇದ್ದ

ಬೆಲೆಯನ್ನು ಆಧರಿಸಿ ತೋರಿಸಲಾಗಿದೆ. ನಮ್ಮ ಮನೆಯಲ್ಲಿದ್ದಂತಹ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ ಅನೇಕ ಉಪಕರಣಗಳು ನಮಗೆ ಉಡುಗೊರೆಯಾಗಿ ದೊರೆತಿದ್ದವು. ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳನ್ನು ಖರೀದಿಸಲು ನಾನು ಮತ್ತು ನನ್ನ ಗಂಡ ಸುಮಾರು ರೂ.60,000/- ಹಣವನ್ನು ಖರ್ಚು ಮಾಡಿದ್ದೇವೆ.

13. ಪೊಲೀಸರು ಐಟಂ ನಂ.27, 28, 29 ಮತ್ತು 31 ರಲ್ಲಿರುವ ಆಸ್ತಿಗಳ ಬೆಲೆಯನ್ನು ಅತೀ ಹೆಚ್ಚಾಗಿ ತೋರಿಸಿದ್ದಾರೆ. ಆ ವಸ್ತುಗಳ ನಿಜವಾದ ಬೆಲೆಯನ್ನು ನಾನು ಪೊಲೀಸರಿಗೆ ತಿಳಿಸಿದ್ದೇನೆ. ಆದರೆ ಅವರು ಅದನ್ನು ಪರಿಗಣಿಸಿರುವುದಿಲ್ಲ.

14. ನಾನು ಟೈಲರಿಂಗ್ ಕೆಲಸ ಸಹ ಮಾಡಿದ್ದೇನೆ ಮತ್ತು ಅದರಿಂದ ಆದಾಯ ಪಡೆದಿದ್ದೇನೆ. ನನಗೆ ಟೈಲರಿಂಗ್ ಮತ್ತು ಟ್ಯೂಷನ್ ದಿಂದ ಬಂದ ಆದಾಯವನ್ನು ನನ್ನ ಆದಾಯ ತೆರಿಗೆ ರಿಟರ್ನ್ ದಲ್ಲಿ ಕಾಣಿಸಿದ್ದೇನೆ. ನನ್ನ ಆದಾಯ ತೆರಿಗೆ ರಿಟರ್ನ್ ಗಳನ್ನು ಪೊಲೀಸರಿಗೆ ಆರೋಪಿ ಪೂರೈಸಿದ್ದಾನೆ. ನಿಪಿ-160 ರಲ್ಲಿ ಪುಟ ಸಂಖ್ಯೆ 262 ರಿಂದ 299 ರಲ್ಲಿ ನಾನು ಸಲ್ಲಿಸಿದ ಆದಾಯ ತೆರಿಗೆ ರಿಟರ್ನ್ ಗಳ ಜೆರಾಕ್ಸ್ ಪ್ರತಿಗಳು ಇರುತ್ತವೆ.

15. ನನ್ನ ಹೆಸರಿನಲ್ಲಿ ಟಾಟಾ ಇಂಡಿಕಾ ಕಾರು ಇತ್ತು. ಅದನ್ನು 2004 ರಲ್ಲಿ ಖರೀದಿಸಿದ್ದೇನೆ. ಆ ವಾಹನಕ್ಕೆ 2004 ರಿಂದ ಚೆಕ್ ಮುಕ್ತಾಯದ ಅವಧಿಯ ವರೆಗೆ ಇಂಧನ ಮತ್ತು ನಿರ್ವಹಣೆಗಾಗಿ ಅಂದಾಜು ರೂ.50,000/- ಹಣ ಖರ್ಚು ಮಾಡಿದ್ದೇನೆ. 2010 ರಲ್ಲಿ ನಾನು Maruthi Swift Car ನ್ನು ಖರೀದಿಸಿದ್ದೆನು. ಆ ವಾಹನಕ್ಕೆ ಇಂಧನ ಮತ್ತು ನಿರ್ವಹಣೆಗಾಗಿ ಅಂದಾಜು ರೂ.10,000/- ಹಣವನ್ನು ಈ ಕೇಸನ್ನು

ದಾಖಲಿಸುವವರೆಗೆ ಖರ್ಚು ಮಾಡಿದ್ದೇನೆ. ನಮ್ಮ ಆದಾಯಕ್ಕಿಂತ ನಾವು ಹೊಂದಿದ ಆಸ್ತಿಗಳ ಮೌಲ್ಯ ಮತ್ತು ಖರ್ಚಿನ ಮೊತ್ತ ಹೆಚ್ಚಿಗೆ ಇರಲಿಲ್ಲ.

<u>ಪಾಟೀಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದಃ</u>

16. ನನ್ನ ತಂದೆ ಮುಡಿಪು ದಲ್ಲಿ ಹೋಟೇಲ್ ನಡೆಸುತ್ತಿದ್ದನು. ಆ ಹೋಟೇಲನ್ನು ನನ್ನ ತಂದೆ 10 - 15 ವರ್ಷ ನಡೆಸಿದ್ದಾನೆ. ಆ ಹೋಟೇಲನ್ನು ನನ್ನ ತಂದೆ ನಾನು ಜನಿಸುವ ಪೂರ್ವದಿಂದ ನಡೆಸಿದ್ದಾನೆ. ಆ ಹೋಟೇಲಿನಿಂದ ಎಷ್ಟು ಆದಾಯ ಬರುತ್ತಿತ್ತು ಮತ್ತು ಎಷ್ಟು ಖರ್ಚು ಆಗುತ್ತಿತ್ತು ಎಂಬುದು ನನಗೆ ಗೊತ್ತಿರುವುದಿಲ್ಲ. ಹೋಟೇಲ್ ನಡೆಸುತ್ತಿದ್ದಾಗಲೇ ನನ್ನ ತಂದೆ ಅಡಿಕೆ ಖರೀದಿಸುವ ಮತ್ತು ಮಾರಾಟ ಮಾಡುವ ಉದ್ಯೋಗ ಮಾಡುತ್ತಿದ್ದನು. ರೈತರೇ ನನ್ನ ತಂದೆಯ ಹೊಟೇಲಿಗೆ ಅಡಿಕೆ ತಂದು ಮಾರಾಟ ಮಾಡುತ್ತಿದ್ದರು ಎಂದು ನನಗೆ ಆ ನಂತರ ಗೊತ್ತಾಗಿದೆ. ಅಡಿಕೆ ವ್ಯಾಪಾರದಿಂದ ನನ್ನ ತಂದೆಗೆ ಎಷ್ಟು ಆದಾಯ ಬರುತ್ತಿತ್ತು ಎಂಬುದು ನನಗೆ ಗೊತ್ತಿರುವುದಿಲ್ಲ. ನನ್ನ ತಂದೆ ಅಡಿಕೆ ವ್ಯಾಪಾರ ಮಾಡುತ್ತಿರಲಿಲ್ಲ ಮತ್ತು ಹೋಟೇಲ್ ಉದ್ಯೋಗ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ.

17. ನನ್ನ ವಿದ್ಯಾಭ್ಯಾಸ 1984 ರಲ್ಲಿ ಮುಕ್ತಾಯಗೊಂಡಿದೆ. ನಾನು 1985 ರಿಂದ ಇಲ್ಲಿಯ ವರೆಗೆ ಟ್ಯೂಷನ್ ಹೇಳುತ್ತಿದ್ದೇನೆ. ನಾನು 1 ನೇ ತರಗತಿಯಿಂದ 10 ನೇ ತರಗತಿಯ ಮಕ್ಕಳಿಗೆ ಟ್ಯೂಷನ್ ನೀಡಿದ್ದೇನೆ. 1985 ರಿಂದ ಪೊಲೀಸರು ಕೇಸನ್ನು ದಾಖಲಿಸುವವರಗೆ ಟ್ಯೂಷನ್ ದಿಂದ ನನಗೆ ಸುಮಾರು ರೂ.10,00,000/- ಆದಾಯ ಬಂದಿದೆ. 1985 ರಿಂದ ನನ್ನ ಮದುವೆ ಆಗುವವರೆಗೆ ನನಗೆ ಸುಮಾರು ರೂ.3,00,000/- ರಿಂದ ರೂ.4,00,000/- ಆದಾಯ ಟ್ಯೂಷನ್ ದಿಂದ ಬಂದಿದೆ. ನಾನು 1985 ರಿಂದ ಈ

ಕೇಸನ್ನು ದಾಖಲಿಸುವವರೆಗೆ ಟ್ಯೂಷನ್ ನೀಡುವ ಸಂಪ್ರದಾಯ ಇರಲಿಲ್ಲ ಮತ್ತು ನಾನು ಟ್ಯೂಷನ್ ನೀಡಿಲ್ಲ ಅಂದರೆ ಸರಿಯಲ್ಲ.

18. ನನಗೆ ಎಲ್.ಐ.ಸಿ. ಯಿಂದ ಕಮಿಷನ್ ಹಣ ಚೆಕ್ ರೂಪದಲ್ಲಿ ಬಂದಿರುತ್ತದೆ. ನಿಶಾನೆ ಪಿ-160 ರಲ್ಲಿ ಪುಟ ಸಂಖ್ಯೆ 201 ರಿಂದ 206 ರಲ್ಲಿ ನನಗೆ ಎಲ್.ಐ.ಸಿ. ಯಿಂದ ಬಂದ ಆದಾಯವನ್ನು ಕಾಣಿಸಲಾಗಿದೆ. ಸಾಕ್ಷಿಗೆ ಈ ಜೆರಾಕ್ಸ್ ಪ್ರತಿಗಳ ಮೂಲ ದಾಖಲೆಗಳು ಎಲ್ಲಿವೆ ಎಂದು ಕೇಳಿದಾಗ ಸಾಕ್ಷಿ ಮನೆಯಲ್ಲಿ ಇವೆ ಮತ್ತು ಅವುಗಳನ್ನು ಹಾಜರುಪಡಿಸುತ್ತೇನೆ ಎಂದು ಉತ್ತರಿಸುತ್ತಾರೆ. ನನಗೆ ಚೆಕ್ ಅವಧಿಯಲ್ಲಿ ಎಲ್.ಐ.ಸಿ. ಯಿಂದ ರೂ.10,00,000/- ಆದಾಯ ಬಂದಿಲ್ಲ ಅಂದರೆ ಸರಿಯಲ್ಲ.

19. ನನ್ನ ಮದುವೆಗೆ ಎಷ್ಟು ಖರ್ಚು ಆಗಿದೆ ಎಂಬುದು ನನಗೆ ಗೊತ್ತಿರುವುದಿಲ್ಲ. ನನ್ನ ಮದುವೆ ಕಾಲಕ್ಕೆ ತಮರುಮನೆಯವರು ನೀಡಿದ ಬಂಗಾರ ಮತ್ತು ಬೆಳ್ಳಿಯ ಸಾಮಾನುಗಳ ರಶೀದಿ ಅಥವಾ ಅಕ್ಕಸಾಲಿಗರ ದಾಖಲೆಗಳು ಇರುವುದಿಲ್ಲ. ನನಗೆ ತವರುಮನೆಯವರು ಬಂಗಾರದ ಆಭರಣಗಳನ್ನು, ಬೆಳ್ಳಿಯ ಸಾಮಾನುಗಳನ್ನು ಮತ್ತು ನಗದು ಹಣವನ್ನು ನೀಡಿಲ್ಲ ಅಂದರೆ ಸರಿಯಲ್ಲ. ಸೀಮಂತ ಕಾರ್ಯಕ್ರಮವನ್ನು ಗಂಡನ ಮನೆಯಲ್ಲಿ ಮಾಡಲಾಗುತ್ತದೆ ಅಂದರೆ ಸರಿಯಲ್ಲ ಸೀಮಂತ ಕಾರ್ಯಕ್ರಮದಲ್ಲಿ ಬಂಗಾರದ ಆಭರಣಗಳನ್ನು ನನಗೆ ನೀಡಿದ ಕುರಿತು ಮತ್ತು ಅವುಗಳನ್ನು ಖರೀದಿಸಿದ ಕುರಿತು ಯಾವುದೇ ದಾಖಲೆಗಳು ಇರುವುದಿಲ್ಲ. ಸೀಮಂತ ಕಾರ್ಯಕ್ರಮದಲ್ಲಿ ನನಗೆ ಬಂಗಾರದ ಆಭರಣಗಳನ್ನು ತವರುಮನೆಯವರು ನೀಡಿಲ್ಲ ಅಂದರೆ ಸರಿಯಲ್ಲ.

20. ಮೋಹನ್ ದಾಸ್ ಸಾಲಿಯಾನ್ ಮತ್ತು ನನ ಮಧ್ಯದಲ್ಲಿ ಬಾಡಿಗೆ ಕರಾರುಪತ್ರ ಆಗಿರುತ್ತದೆ. ಆತನು ಸೈಟ್ ಗಳ ಕುರಿತು ರಿಯಲ್ ಎಸ್ಟೇಟ್ ಉದ್ಯೋಗ ಮಾಡುತ್ತಿದ್ದನು. ಅವರು ವ್ಯವಹಾರ ಮಾಡುತ್ತಿದ್ದ ಕುರಿತು ಲೈಸೆನ್ಸ್ ಪಡೆದಿದ್ದರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿರುವುದಿಲ್ಲ. ನಾನು ಎರಡು ಅಂಗಡಿಗಳಲ್ಲಿ ನಮ್ಮ ಮನೆಯ ಸಾಮಾನುಗಳನ್ನು ಇಟ್ಟಿದ್ದೆನು ಅಂದರೆ ಸರಿಯಲ್ಲ. ಆ ಅಂಗಡಿಗಳನ್ನು ಬಾಡಿಗೆಯಿಂದ ನೀಡಿರಲಿಲ್ಲ ಅಂದರೆ ಸರಿಯಲ್ಲ. ನಾನು ಮೋಹನ್ ದಾಸ್ ಸಾಲಿಯಾನ್ ಇವರ ಮೂಲಕ ಬಾಡಿಗೆಯ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ.

21. ನನ್ನ ಮಗ ಜನಿಸಿದ 12 ನೇ ದಿನಕ್ಕೆ ನಾಮಕರಣ ಆಗಿದೆ. ಆ ಕಾರ್ಯಕ್ರಮದಲ್ಲಿ ಉಡುಗೊರೆಯಾಗಿ ಪಡೆದ ಬಂಗಾರದ ಆಭರಣಗಳ ದಾಖಲೆಗಳು ಇರುವುದಿಲ್ಲ. ಆ ಕಾರ್ಯಕ್ರಮದಲ್ಲಿ ನನ್ನ ಸಂಬಂಧಿಕರು ಮತ್ತು ತವರುಮನೆಯವರು ಹಣ ಮತ್ತು ಬಂಗಾರದ ನೀಡಿಲ್ಲ ಅಂದರೆ ಸರಿಯಲ್ಲ. ಸಾಮಾನ್ಯವಾಗಿ ಉಡುಗೊರೆಯಾಗಿ ಪಡೆದ ವಿವರವನ್ನು ಒಂದು ಪುಸ್ತಕದಲ್ಲಿ ಬರೆದಿಡಲಾಗುತ್ತದೆ ಅಂದರೆ ಸಾಕ್ಷಿ ತಾನು ಬರೆದಿಲ್ಲ ಎಂದು ಹೇಳುತ್ತಾರೆ.

22. ನನಗೆ 6 ಜನ ಸಹೋದರಿಯರು ಇದ್ದಾರೆ. ನನ್ನ ಸಹೋದರಿಯರ ಲಗ್ನ ಆಗಿದೆ. ನನ್ನ ತಂದೆ ಮರಣ ಹೊಂದಿದ ನಂತರ ನನ್ನ ದೊಡ್ಡ ಅಕ್ಕ ಮತ್ತು ಅವಳ ಮಗ ನನ್ನ ತಾಯಿಯನ್ನು ನೋಡಿಕೊಳ್ಳುತ್ತಿದ್ದಾರೆ. ನನ್ನ ದೊಡ್ಡನ ಅಕ್ಕನ ಮಗ 1975 ರಲ್ಲಿ ಜನಿಸಿದ್ದಾನೆ.

23. ನನ್ನ ಮಗನ ವಿದ್ಯಾಭ್ಯಾಸಕ್ಕಾಗಿ ನನ್ನ ತವರುಮನೆಯವರು ಯಾವ ಅವಧಿಯಲ್ಲಿ ಹಣ ನೀಡಿದ್ದಾರೆ ಎಂಬುದು ನೆನಪಿಲ್ಲ. ಹಣ ನೀಡಲು 2007ರಲ್ಲಿ ಪ್ರಾರಂಭಿಸಿದ್ದರು. ನನ್ನ ತವರುಮನೆಯವರು ನನಗೆ ಹಣವನ್ನು ನಗದಾಗಿ ನೀಡಿದ್ದಾರೆ. ನನ್ನ ಮಗನ ವಿದ್ಯಾಭ್ಯಾಸಕ್ಕಾಗಿ ನನ್ನ ತವರುಮನೆಯವರು ರೂ.10,00,000/- ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

24. ನನ್ನ ತಾಯಿಗೆ ಕೃಷಿಯಿಂದ ಎಷ್ಟು ಆದಾಯ ಬರುತ್ತಿತ್ತು ಎಂಬ ಕುರಿತು ತಜ್ಞರ ವರದಿಯನ್ನು ಪಡೆದಿದ್ದೇವೆ. ಮೊದಲನೇ ತಜ್ಞರು ಯಾವ ವರ್ಷ ಬಂದಿದ್ದರು ಎಂದು ನನಗೆ ನೆನಪಿಲ್ಲ. ಎರಡನೇ ತಜ್ಞರು ಸುಮಾರು 4 - 5 ತಿಂಗಳ ಹಿಂದೆ ಕೃಷಿ ಜಮೀನಿಗೆ ಬಂದಿದ್ದಾರೆ. ಕೃಷಿ ಆದಾಯವನ್ನು ಕಂಡುಕೊಳ್ಳುವ ತಜ್ಞರು ನನ್ನ ತಾಯಿಯ ಜಮೀನುಗಳಿಗೆ ಭೇಟಿ ನೀಡಿಲ್ಲ ಅಂದರೆ ಸರಿಯಲ್ಲ.

25. ನನ್ನ ತಂಗಿಗೆ ಜಾಗೆಯನ್ನು ಮಾರಾಟ ಮಾಡಿದಾಗ ನನಗೆ ರೂ.62,900/- ಹಣ ಬಂದಿದೆ. ಆ ಸೈಟನ್ನು ಮಾರಾಟ ಮಾಡಿದಾಗ ನನಗೆ ರೂ.80,000/- ಹಣ ಬಂದಿದೆ ಮತ್ತು ಅದರ ಖರ್ಚನ್ನು ನಾನು ವಹಿಸಿಲ್ಲ ಅಂದರೆ ಸರಿಯಲ್ಲ.

26. ನನ್ನ ತಾಯಿ ಗೃಹಪ್ರವೇಶದಲ್ಲಿ ಬೆಳ್ಳಿಯ ಸಾಮಾನುಗಳನ್ನು ನೀಡಿದ್ದಾಳೆ. ಉಳಿದ ಸಂಬಂಧಿಕರು ನಗದು ಹಣವನ್ನು ನೀಡಿದ್ದಾರೆ. ಗೃಹಪ್ರವೇಶದ ಸಂದರ್ಭದಲ್ಲಿ ನಮಗೆ ಯಾವುದೇ ಹಣ ಅಥವಾ ಬೆಳ್ಳಿ ಮತ್ತು ಬಂಗಾರದ ಸಾಮಾನುಗಳು ಬಂದಿಲ್ಲ ಅಂದರೆ ಸರಿಯಲ್ಲ.

27. ನನ್ನ ಮಗನ ವಿದ್ಯಾಭ್ಯಾಸಕ್ಕಾಗಿ ಲೋಕಯ್ಯ ಗೌಡ ಈತನಿಂದ ರೂ.3,20,000/- ಹಣವನ್ನು ಸಾಲವಾಗಿ ಪಡೆದಿದ್ದೇನೆ. ಬೇರೆಯವರಿಂದ ವಿದ್ಯಾಭ್ಯಾಸಕ್ಕಾಗಿ ಸಾಲವನ್ನು ನಾನು ಪಡೆದಿಲ್ಲ. ಲೋಕಯ್ಯ ಗೌಡ ಈತನಿಂದ ಸಾಲ ಪಡೆದುಕೊಳ್ಳುವಾಗ ಯಾವುದೇ ದಾಖಲೆ ಮಾಡಿಕೊಂಡಿರುವುದಿಲ್ಲ. ಆ ಸಾಲವನ್ನು ನಾನು ನಗದಾಗಿ ಮರುಪಾವತಿ ಮಾಡಿದ್ದೇನೆ. ನಾನು ಲೋಕಯ್ಯ ಗೌಡ ಈತನಿಂದ ಸಾಲ ಪಡೆದಿಲ್ಲ ಅಂದರೆ ಸರಿಯಲ್ಲ.

28. ಸೀಮಾ ಕುಮಾರಿ, ನಿರ್ಮಲಾ ಕುಮಾರಿ, ಚಂದ್ರಶೇಖರ್ ಶೆಣೈ, ಗುರುರಾಜ್ ಇವರು ಹಣ ನೀಡಿದಾಗ ಯಾವುದೇ ದಾಖಲೆಗಳನ್ನು ಮಾಡಿರುವುದಿಲ್ಲ. ಟ್ಯೂಷನ್ ಕೊಡಲು ನನ್ನ ಹತ್ತಿರ ಪೆನ್ ನ್ನು ಹೊರತುಪಡಿಸಿ ಬೇರೆ ಯಾವುದೇ ಸಲಕರಣೆಗಳು ಇರಲಿಲ್ಲ. ಕಾರಣ ಆ ಸಲಕರಣೆಗಳು ಪೊಲೀಸರು ಮನೆ ಶೋಧನೆ ಮಾಡುವಾಗ ಸಿಕ್ಕಿರುವುದಿಲ್ಲ. ಹೊಲಿಗೆ ಕೆಲಸಕ್ಕೆ ಬೇಕಾದಂತಹ ಸಲಕರಣೆಗಳು ನನ್ನಲ್ಲಿ ಇದ್ದವು. ಆದರೆ ಯಂತ್ರವನ್ನು ಸರ್ವಿಸಿಂಗ್ ಗೆ ಕೊಟ್ಟಿದ್ದೆನು ನಾನು ಟೈಲರಿಂಗ್ ಮಾಡುತ್ತಿರಲ್ಲಿ ಮತ್ತು ಟ್ಯೂಷನ್ ಹೇಳುತ್ತಿರಲಿಲ್ಲ ಅಂದರೆ ಸರಿಯಲ್ಲ.

29. ನನ್ನ ಮನೆಯಲ್ಲಿ ಇದ್ದಂತಹ ಎಲೆಕ್ಟ್ರಾನಿಕ್ ಉಪಕರಣಗಳ ಮತ್ತು ಎಲೆಕ್ಟ್ರಿಕಲ್ ಉಪಕರಣಗಳ ಕೆಲವೊಂದು ಬಿಲ್ಲುಗಳನ್ನು ಶೋಧನೆ ಕಾಲಕ್ಕೆ ಪೊಲೀಸರಿಗೆ ನೀಡಿದ್ದೇನೆ. ನಾವು ನೀಡಿದ ಬಿಲ್ಲುಗಳ ಪ್ರಕಾರವೇ ಮೌಲ್ಯವನ್ನು ಪೊಲೀಸರು ಮಹಜರ್ ದಲ್ಲಿ ಕಾಣಿಸಿದ್ದಾರೆ ಅಂದರೆ ಸರಿಯಲ್ಲ. ಪೊಲೀಸರು ಎಲೆಕ್ಟ್ರಾನಿಕ್ ಉಪಕರಣಗಳ ಮತ್ತು ಎಲೆಕ್ಟ್ರಿಕಲ್ ಉಪಕರಣಗಳ ಬೆಲೆಗಳನ್ನು ಹೆಚ್ಚು ತೋರಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

30. ಕಾರಿನ ನಿರ್ವಹಣಾ ವೆಚ್ಚಗಳ ಕುರಿತು ಕೆಲವೊಂದು ದಾಖಲೆಗಳನ್ನು ನಾನು ಪೊಲೀಸರಿಗೆ ನೀಡಿದ್ದೇನೆ. ಕಾರಿನ ಇಂಧನ ಮತ್ತು ನಿರ್ವಹಣಾ ವೆಚ್ಚ ಕೇವಲ ರೂ.60,000/- ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ನನ್ನ, ನನ್ನ ಗಂಡನ ಆದಾಯ, ಆಸ್ತಿಗಳ ಬೆಲೆ ಮತ್ತು ಖರ್ಚಿನ ವಿವರಗಳ ಕುರಿತು ಸುಳ್ಳು ಸಂಗತಿಗಳನ್ನು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.